ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 24–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | '108 ಆರೋಗ್ಯ ಕವಚ' ಕ್ಕೆ ಹೊಸದಾಗಿ ಸೇರ್ಪಡೆಗೊಂಡ 198 ಆಂಬ್ಯುಲೆನ್ಸ್ ವಾಹನಗಳ ಲೋಕಾರ್ಪಣೆ ಕಾರ್ಯಕ್ರಮ:<br><br>ಉದ್ಘಾಟನೆ:<br><br>ಶ್ರೀ ಸಿದ್ದರಾಮಯ್ಯ<br>ಮುಖ್ಯ ಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಘನ ಉಪಸ್ಥಿತಿ:<br><br>ಶ್ರೀ ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.<br><br>ಅಧ್ಯಕ್ಷತೆ:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು. | 25-11-2014<br>ಮಂಗಳವಾರ<br>ಬೆಳಿಗ್ಗೆ<br>10–00 ಗಂಟೆಗೆ | ವಿಧಾನಸೌದ ಮುಂಭಾಗ,<br>ಬೆಂಗಳೂರು. |
| 2. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ "ಗ್ರಾಮಾಭಿವೃದ್ಧಿ ಪಥ" ವಿಧಾನಸಭೆ ಸದಸ್ಯರ ಒಂದು ದಿನದ ಕಾರ್ಯಾಗಾರ.<br><br>ಉದ್ಘಾಟನೆ ಹಾಗೂ ಪುಸ್ತಕ ಬಿಡುಗಡೆ: | 25-11-2014<br>ಮಂಗಳವಾರ<br>ಬೆಳಿಗ್ಗೆ<br>10–30 ಗಂಟೆಗೆ | ಕೊಠಡಿ ಸಂಖ್ಯೆ 419,<br>ವಿಕಾಸಸೌಧ,<br>ಬೆಂಗಳೂರು. |

| | | | |
|---|---|---|---|
| | ಶ್ರೀ ಸಿದ್ದರಾಮಯ್ಯ<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಪುಸ್ತಕಾರ್ಪಣೆ:<br><br>ಶ್ರೀ ಎಚ್. ಕೆ. ಪಾಟೀಲ,<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.<br><br>ಅಧ್ಯಕ್ಷತೆ:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು | | |
| ೩. | ಪತ್ರಿಕಾಗೋಷ್ಠಿ:<br><br>ಜಲ ಸಂಪನ್ಮೂಲ, ಭಾರಿ ಮತ್ತು ಮಧ್ಯಮ ನೀರಾವರಿ ಶ್ರೀ ಎಂ.ಬಿ. ಪಾಟೀಲ ಅವರಿಂದ | 25-11-2014<br>ಮಂಗಳವಾರ<br>ಬೆಳಿಗ್ಗೆ<br>11–30 ಗಂಟೆಗೆ | ಕೊಠಡಿ ಸಂಖ್ಯೆ 334,<br>ಸಮ್ಮೇಳನ ಸಭಾಂಗಣ,<br>ಮೂರನೇ ಮಹಡಿ,<br>ವಿಧಾನಸೌಧ,<br>ಬೆಂಗಳೂರು. |

# ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ

## (ನಾಳೆ ಕೊನೆಯ ದಿನ)

ಬೆಳಗಾವಿಯಲ್ಲಿ ಡಿಸೆಂಬರ್ ೯ ರಿಂದ ೨೦ ರ ವರೆಗೆ ನಡೆಯಲಿರುವ ರಾಜ್ಯ ವಿಧಾನ ಮಂಡಲ ಅಧಿವೇಶನದ ವರದಿಗಾಗಿ ಹಾಜರಾಗ ಬಯಸುವ ಸುದ್ದಿವಾಹಿನಿಗಳು ಹಾಗೂ ರಾಜ್ಯಮಟ್ಟದ ದಿನಪತ್ರಿಕೆಗಳ ***ಮಾನ್ಯತೆ ಪಡೆದ*** ಪ್ರತಿನಿಧಿಗಳ ವಿವರಗಳನ್ನು ಸಂಸ್ಥೆಯ ಶೀರ್ಷಿಕಾ ಪತ್ರ(ಲೆಟರ್‌ಹೆಡ್)ದಲ್ಲಿ ನಮೂದಿಸಿ ಸಲ್ಲಿಸಲು ಕೋರಲಾಗಿದೆ.

ಈ ಕೆಳಗೆ ನೀಡಿರುವ ನಮೂನೆಯ ಮಾದರಿಯಲ್ಲಿ ವಿವರಗಳನ್ನು ಒದಗಿಸಿ, ಸಂಸ್ಥೆಯ ಮುಖ್ಯಸ್ಥರೇ ಶಿಫಾರಸು ಮಾಡಿರಬೇಕು. ಮುದ್ರಣ ಮಾಧ್ಯಮದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಹಾಗೂ ವಿದ್ಯುನ್ಮಾನ ಮಾಧ್ಯಮದ ವರದಿಗಾರರು, ಕ್ಯಾಮರಾಮನ್ ಸೇರಿದಂತೆ ಗರಿಷ್ಠ ೮ ಪ್ರತಿನಿಧಿಗಳಿಗೆ ಮಾತ್ರ ವಾಸ್ತವ್ಯ ವ್ಯವಸ್ಥೆ ಕಲ್ಪಿಸಲಾಗುವುದು. ಈ ಶಿಫಾರಸು ಪತ್ರ ಸಲ್ಲಿಸಲು ನವೆಂಬರ್ ೨೫ ಕೊನೆಯ ದಿನವಾಗಿದೆ.

ವಿ.ಸೂ:

1. ಹಿಂದಿನ ಅಧಿವೇಶನದಲ್ಲಿ ಒದಗಿಸಿರುವ ಪ್ರವೇಶ ಪತ್ರ ಈ ಅಧಿವೇಶನಕ್ಕೂ ಅನ್ವಯವಾಗುತ್ತದೆ. ಹೊಸದಾಗಿ ಪ್ರವೇಶ ಪತ್ರ ನೀಡಲಾಗುವುದಿಲ್ಲ.

2. ತಡವಾಗಿ ಬಂದ ಮನವಿಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ.

ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗೆ,

ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಬೆಂಗಳೂರು

ಮಾನ್ಯರೇ,

ವಿಷಯ: ವಿಧಾನ ಮಂಡಲ ಅಧಿವೇಶನ ವರದಿಗೆ ಪ್ರತಿನಿಧಿಗಳನ್ನು ನಿಯೋಜಿಸುವ ಬಗ್ಗೆ

ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನಕ್ಕೆ ನಮ್ಮ ಮಾಧ್ಯಮ ಸಂಸ್ಥೆಯಿಂದ ಈ ಕೆಳಕಂಡ ವರದಿಗಾರರು/ ಕ್ಯಾಮರಾಮನ್‌ಗಳನ್ನು ನಿಯೋಜಿಸಲಾಗಿದೆ.

ವಿಧಾನಸಭೆ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ವಿಧಾನ ಪರಿಷತ್ ಕಲಾಪ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ಸ್ಥಳ: ಸಂಸ್ಥೆಯ ಮುಖ್ಯಸ್ಥರು

ದಿನಾಂಕ:

**ನಿರ್ದೇಶಕರ ಪರವಾಗಿ**

# <u>ಪತ್ರಿಕಾ ಪ್ರಕಟಣೆ</u>

## ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾಗಿ ಶ್ರೀ ಎಸ್.ವಿ. ರಾಜೇಂದ್ರಸಿಂಗ್ ಬಾಬು

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾಗಿ ನೇಮಕ ಮಾಡಿ ಸರ್ಕಾರವು ಅಧಿಸೂಚನೆ ಹೊರಡಿಸಿದೆ.

## ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾಗಿ ಶ್ರೀ ರಂಗಸ್ವಾಮಯ್ಯ

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಶ್ರೀ ರಂಗಸ್ವಾಮಯ್ಯ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಮದ್ಯಪಾನ ಸಂಯಮಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡಿ ಸರ್ಕಾರವು ಅಧಿಸೂಚನೆ ಹೊರಡಿಸಿದೆ.

## ಆರೋಗ್ಯ ಕವಚ 108 ಕ್ಕೆ ಹೊಸದಾಗಿ
## 198 ಆಂಬ್ಯುಲೆನ್ಸ್‌ಗಳ ಲೋಕಾರ್ಪಣೆ

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಆರೋಗ್ಯ ಕವಚ–108 ಯೋಜನೆಯಡಿಯಲ್ಲಿ ಹೊಸದಾಗಿ 198 ಆಂಬ್ಯುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಲಾಗುತ್ತಿದೆ. ಈಗಾಗಲೇ ಇರುವ 517 ಆಂಬ್ಯುಲೆನ್ಸ್‌ಗಳ ಜೊತೆ ನೂತನವಾಗಿ ಸೇರ್ಪಡೆಗೊಳ್ಳುತ್ತಿರುವ 198 ಆಂಬ್ಯುಲೆನ್ಸ್‌ಗಳ ಸೇರಿ ಒಟ್ಟು 715 ಆಂಬ್ಯುಲೆನ್ಸ್‌ಗಳು ಕರ್ನಾಟಕದಾದ್ಯಂತ ಜನರ ತುರ್ತು ಸೇವೆಗಾಗಿ ಮೀಸಲಾಗಿದೆ. ಕರ್ನಾಟಕ ಸರ್ಕಾರದ ಮಹಾತ್ವಾಂಕ್ಷೆಯ ಈ ಯೋಜನೆಗೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಚಾಲನೆ ನೀಡುವರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಯು.ಟಿ ಖಾದರ್ ಉಪಸ್ಥಿತರಿರುವರು ಹಾಗೂ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸುವರು.

ಆರೋಗ್ಯ ಕವಚ 108 ಎಲ್ಲಾ ರೀತಿಯ ತುರ್ತು ಸಂದರ್ಭಗಳಲ್ಲಿ ಸಿಗುವಂತಹ ಸೇವೆ ಹೆರಿಗೆ ಅಥವಾ ಪ್ರಸೂತಿ ಸಂದರ್ಭದಲ್ಲಿ, ರಸ್ತೆ ಅಥವಾ ಇನ್ನಿತರ ಅಪಘಾತಗಳ ಸಂದರ್ಭಗಳಲ್ಲಿ, ಯಾವುದೇ

ತುರ್ತು ಚಿಕಿತ್ಸೆ ಬೇಕಾದಂತಹ ವೈದ್ಯಕೀಯ ಪ್ರಕರಣಗಳಲ್ಲಿ ಈ ಸೇವೆಯನ್ನು ಬಳಸಬಹುದು. ಜೊತೆಗೆ ಪೊಲೀಸ್, ಅಗ್ನಿ ದುರಂತ ಮುಂತಾದ ಸಂದರ್ಭದಲ್ಲಿ ಕೂಡ ಈ ಸೇವೆಯನ್ನು ಬಳಸಬಹುದು.

ಯಾವುದೇ ಅಪಘಾತ ಅಥವಾ ಹೃದಯಾಘಾತದಂತಹ ಸಂದರ್ಭದಲ್ಲಿ ಮೊದಲ ಒಂದು ಗಂಟೆ ಅತ್ಯಂತ ಮಹತ್ವದ್ದಾಗಿದೆ. ಇಂತಹ ಸಮಯದಲ್ಲಿ ವೈದ್ಯಕೀಯ ಸೇವೆ ದೊರಕಿದರೆ ಪ್ರಾಣವನ್ನು ಉಳಿಸುವುದಕ್ಕೆ ಸಾಧ್ಯ. ಈ " Golden Hour" ನಲ್ಲಿ ವ್ಯಕ್ತಿಯ ಪ್ರಾಣ ಉಳಿಸುವ ಉದ್ದೇಶದಿಂದ ಈ ಆರೋಗ್ಯ ಕವಚ ಯೋಜನೆ ಹಮ್ಮಿಕೊಳ್ಳಲಾಗಿದೆ.

108 ಎನ್ನುವ ಉಚಿತ ದೂರವಾಣಿ ಸಂಖ್ಯೆಗೆ ಕರೆ ಮಾಡಿದರೆ ಆಂಬ್ಯುಲೆನ್ಸ್ ದೊರೆಯುತ್ತದೆ. ಈ ಕರೆಯನ್ನು ಸ್ಥಿರ ದೂರವಾಣಿ ಅಥವಾ ಮೊಬೈಲ್‌ನಿಂದ ಮಾಡಬಹುದಾಗಿದೆ. ಆದ್ದರಿಂದ ಈ ಸೇವೆ ದಿನದ 24 ಗಂಟೆ, ವಾರದ ಏಳು ದಿನ, ವರ್ಷದ 365 ದಿನವೂ ಲಭ್ಯ. ಕರ್ನಾಟಕದ 6 ಕೋಟಿಗೂ ಮೀರಿದ ಜನಸಂಖ್ಯೆಯಲ್ಲಿ ಯಾರು ಬೇಕಾದರೂ ಕರೆ ಮಾಡಿ ಈ ಸೌಲಭ್ಯ ಪಡೆಯಬಹುದು. ಈ ಸೇವೆಯನ್ನು ನಗರ, ಗ್ರಾಮೀಣ ಎನ್ನುವ ಭೇದವಿಲ್ಲದೆ, ಸಿರಿವಂತರು, ಬಡವರು ಎನ್ನುವ ತಾರತಮ್ಯವಿಲ್ಲದೇ ಎಲ್ಲ ವರ್ಗದ ಜನರಿಗೆ ಸಂಪೂರ್ಣ ಉಚಿತವಾಗಿ ಪ್ರಾಣ ಉಳಿಸುವ ಈ ಸೇವೆಯನ್ನು ನೀಡಲಾಗುತ್ತಿದೆ.

ಈ ಯೋಜನೆಯನ್ನು Public Privae Partnership ಮೂಲಕ ಒದಗಿಸಲಾಗುತ್ತಿದೆ. ಇಂತಹ ಸೇವೆಯನ್ನು ನೀಡಿದ ಅಪಾರ ಅನುಭವ ಇರುವಂತಹ ಸಿಕಂದರಾಬಾದ್‌ನ EMRI ಎನ್ನು ಲಾಭರಹಿತ ಸಂಸ್ಥೆಯ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. 2008 ನವೆಂಬರ್ 1 ರಂದು ಯೋಜನೆಯನ್ನು ಪ್ರಾರಂಭಿಸಲಾಯಿತು. ಪ್ರಸ್ತುತ ಕರ್ನಾಟಕದಲ್ಲಿ 517 ಆಂಬ್ಯುಲೆನ್ಸ್‌ಗಳು ಕೆಲಸ ಮಾಡುತ್ತಿವೆ. ಇದು ಸುಸಜ್ಜಿತವಾದಂತಹ ಆಂಬ್ಯುಲೆನ್ಸ್. ಈ ಆಂಬ್ಯುಲೆನ್ಸ್‌ಗಳಲ್ಲಿ ತುರ್ತು ವೈದ್ಯಕೀಯ ಯಂತ್ರೋಪಕರಣಗಳು ಇರುತ್ತವೆ. Oxygen, Ventilators ಮುಂತಾದ ಪ್ರಾಣ ಉಳಿಸುವ ಸೌಕರ್ಯಗಳಿವೆ. ಈ ವಾಹನವನ್ನು ವಿಶೇಷವಾಗಿ ತರಬೇತಿ ಹೊಂದಿದ ಚಾಲಕರು ಓಡಿಸುತ್ತಾರೆ. ಆಂಬ್ಯುಲೆನ್ಸ್ ಒಳಗಡೆ ಶುಶ್ರೂಷಕರು ಹಾಗೂ ನುರಿತ ಅರೆ ವೈದ್ಯಕೀಯ ತಂತ್ರಜ್ಞರು ಇರುತ್ತಾರೆ. ಚಾಲಕರಿಗೆ ಪೈಲಟ್ ಎಂದು ಕರೆಯಲಾಗುತ್ತದೆ. ಇವರೂ ಸೇರಿ ಒಟ್ಟು 5 ಜನರಿರುತ್ತಾರೆ. ಇವರೆಲ್ಲರಿಗೂ ತುರ್ತು ಸ್ಥಿತಿಗಳನ್ನು ನಿಭಾಯಿಸುವ ವಿಶೇಷ ಕೌಶಲ್ಯವಿರುತ್ತದೆ. ವಾಹನದಲ್ಲಿ ತುರ್ತು ಚಿಕಿತ್ಸೆ ನೀಡುತ್ತಾ ಹತ್ತಿರದ ಆಸ್ಪತ್ರೆಗೆ ಹೆಚ್ಚಿನ ಸೇವೆಗಾಗಿ ತುರ್ತಾಗಿ ರೋಗಿಯನ್ನು ಸಾಗಿಸಿ ಪ್ರಾಣ ಉಳಿಸುವ ಕೆಲಸದಲ್ಲಿ 715 ತಂಡಗಳು ಕಾರ್ಯೋನ್ಮುಖರಾಗಿರುತ್ತಾರೆ.

ರಾಜ್ಯದಲ್ಲಿ ಒಟ್ಟು 715 ಆಂಬ್ಯುಲೆನ್ಸ್‌ಗಳು ಸೇವೆಗೆ ಮೀಸಲಿದ್ದು, ಸುಮಾರು 75 ಸಾವಿರ ಜನಸಂಖ್ಯೆಗೆ ಒಂದರಂತೆ ಆಂಬ್ಯುಲೆನ್ಸ್ ಒದಗಿಸಲಾಗಿದೆ. ಇವರುಗಳನ್ನು ಭೌಗೋಳಿಕವಾಗಿ ನಿರ್ಧಿಷ್ಟ ಸ್ಥಳಗಳಲ್ಲಿ ಇರಿಸಲಾಗಿದೆ. ಬೆಂಗಳೂರಿನಲ್ಲಿ ಸುಸುಜ್ಜಿತವಾದ ಕಂಪ್ಯೂಟರೀಕೃತ ಕೇಂದ್ರ ಕಚೇರಿಯಿದ್ದು, ದಿನದ 24 ಗಂಟೆಯೂ ಆಂಬ್ಯುಲೆನ್ಸ ಹಾಗೂ ಕೇಂದ್ರ ಕಚೇರಿಗೂ ನಿರಂತರ ದೂರವಾಣಿ ಸಂಪರ್ಕವಿರುತ್ತದೆ. ಈ ಎಲ್ಲಾ ಕಾರಣದಿಂದ, ಸರಾಸರಿ 20 ನಿಮಿಷಗಳಲ್ಲಿ ಆಂಬ್ಯುಲೆನ್ಸ್ ಸೇವೆ ಲಭ್ಯವಾಗುತ್ತದೆ.

ಸಮ:ಬಾಬು:ಜಿಪಿಆರ್.

## ಜಿಮ್/ದೈಹಿಕ ಸಾಮರ್ಥ್ಯ ಟ್ರೇನರ್ ಕಮ್ ಥೆರಪಿಸ್ಟ್ ತರಬೇತಿಗೆ ಅರ್ಜಿ ಆಹ್ವಾನ

**ಬೆಂಗಳೂರು, 24 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಯುವ ಸಬಲೀಕರಣ ಮತ್ತು ಕೀಡಾ ಇಲಾಖೆಯು ಯುವ ಜನರಿಗೆ ಉದ್ಯೋಗಾಧಾರಿತ ವೃತ್ತಿ ಕೌಶಲ್ಯ ತರಬೇತಿ ಯೋಜನೆಯಡಿ 18 ರಿಂದ 30 ವರ್ಷ ವಯೋಮಿತಿಯೊಳಗಿನ ಯುವಜನರಿಗೆ ಜಿಮ್/ದೈಹಿಕ ಸಾಮರ್ಥ್ಯ ಟ್ರೇನರ್ ಕಮ್ ಥೆರಪಿಸ್ಟ್ ತರಬೇತಿಯನ್ನು ಬೆಂಗಳೂರಿನ ಯುವ ತರಬೇತಿ ಕೇಂದ್ರ, ಕುಂಬಳಗೋಡು ಇಲ್ಲಿ ಆಯೋಜಿಸಲಿದ್ದ ಅರ್ಜಿಗಳನ್ನು ಆಹ್ವಾನಿಸಿದೆ.

ಈ ತರಬೇತಿಯು ಸಂಪೂರ್ಣ ಉಚಿತವಾಗಿದ್ದು, ಆಸಕ್ತ ಯುವಜನರು ಆಯಾ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಭರ್ತಿಮಾಡಿ ನವೆಂಬರ್ 29 ರೊಳಗೆ ಅರ್ಜಿ ಸಲ್ಲಿಸಬೇಕು.

ಎಸ್.ಎಸ್.ಎಲ್.ಸಿ. ಮತ್ತು ಮೇಲ್ಪಟ್ಟು ವಿದ್ಯಾರ್ಹತೆ ಹೊಂದಿದ್ದು, ವಯೋಮಿತಿ 18 ರಿಂದ 30 ವರ್ಷ (30-12-2014). ಹುಟ್ಟಿದ ದಿನಾಂಕ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಪರಿಶೀಲಿಸಿ ಸಂಭಾವ್ಯ ಅಭ್ಯರ್ಥಿಗಳನ್ನು ಅಂತಿಮಗೊಳಿಸಿ ಡಿಸೆಂಬರ್ 2 ರಂದು ಬೆಂಗಳೂರಿನಲ್ಲಿ ಆಯ್ಕೆ ನಡೆಸಲಾಗುವುದು. ಅಭ್ಯರ್ಥಿಗಳಿಗೆ ದೂರವಾಣಿ/ಈ-ಮೇಲ್ ಮೂಲಕ ತಿಳಿಸಲಾಗುವುದು.

ಅಭ್ಯರ್ಥಿಗಳಿಗೆ ಬೆಂಗಳೂರಿಗೆ ಹೋಗಿ ಬರುವ ರೈಲ್ವೆ ಸಾಮಾನ್ಯ ದರ ಅಥವಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಾಮಾನ್ಯ ಬಸ್ ದರವನ್ನು ನೀಡಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

## ರಸ್ತೆ ಸಂಚಾರ ಬದಲು

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

**ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ, ಸತ್ತೇಗಾಲದ ಸಮೀಪದಲ್ಲಿರುವ ರಾಷ್ಟ್ರೀಯ ಹೆದ್ದಾರಿ 209 ದಿಂಡಿಗಲ್ – ಬೆಂಗಳೂರು ಶಾಖೆಯ ಕಿ.ಮೀ 356.150 ರಲ್ಲಿನ ಕಾವೇರಿ ನದಿಗೆ ಅಡ್ಡಲಾಗಿ**

**ನಿರ್ಮಿಸಿರುವ ಸೇತುವೆಯ ಮೇಲೆ ಎಲ್ಲಾ ವಾಹನಗಳ ಸಂಚಾರವನ್ನು ದಿನಾಂಕ 20–11–2014 ರಿಂದ 19–05–2015 ರವರೆಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ.**

**ಪರ್ಯಾಯವಾಗಿ ಮಳವಳ್ಳಿಯಿಂದ ಕೊಳ್ಳೇಗಾಲ ತಲುಪಲು ಬದಲಿ ಮಾರ್ಗವಾದ ರಾವಣಿ–ಬುವಳ್ಳಿ–ಪೂರಿಗಾಲಿ–ಮಡುಕುತೊರೆ–ತಲಕಾಡು–ಮಾದಪುರ–ಮುಳ್ಳೂರು–ಕೊಳ್ಳೇಗಾಲ ಹಾಗೂ ಕೊಳ್ಳೇಗಾಲದಿಂದ ಮಳವಳ್ಳಿಗೆ ತಲುಪಲು ಮುಳ್ಳೂರು, ಕಲ್ಲೂರು ಮಾದಪುರ ರಸ್ತೆಯಲ್ಲಿ ಚಲಿಸಿ ಹೆಮ್ಮಿಗೆ ಸೇತುವೆ ಮುಖಾಂತರ ಕಾವೇರಿಪುರ ಮೇದನಿ ಮಡವಾಡಿ ಬೆಳಕವಾಡಿ ತಲುಪಿ ರಾ.ಹೆ –209 ರ ಸರಪಳಿ 356.150 ರಲ್ಲಿ ಸೇರುವಂತೆ ಕೋರಲಾಗಿದೆ.**

ಸಮ:ಬಾಬು:ಜಿಪಿಆರ್.

## ಸಾರಿಗೆ ಅದಾಲತ್

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

ದಿನಾಂಕ 28–11–2014 ರ ಶುಕ್ರವಾರ ಮಧ್ಯಾಹ್ನ 3–00 ಗಂಟೆಗೆ ಪ್ರಾದೇಶಿಕ ಸಾರಿಗೆ ಕಚೇರಿ, ಬೆಂಗಳೂರು (ದಕ್ಷಿಣ), ಜಯನಗರ ಇಲ್ಲಿ ಸಾರಿಗೆ ಅದಾಲತ್‌ನ್ನು ಕಚೇರಿಯ 2ನೇ ಮಹಡಿಯ ಅಡಿಟೋರಿಯಂನಲ್ಲಿ ಏರ್ಪಡಿಸಲಾಗಿದೆ. ಅದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗಹಿಸಲಿದ್ದಾರೆ. ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಮತ್ತು ಕುಂದು ಕೊರತೆಗಳ ಪರಿಹಾರಕ್ಕಾಗಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಕೋರಿದೆ.

ಸಮ:ಬಾಬು:ಜಿಪಿಆರ್.

## SARIGE ADLAT

Bangalore, November 24 (Karnataka Information)

Sarige Adalat will be held on Friday 28-11-2014 at 3-00 PM in the 2nd floor, Auditorium of the Regional Transport Office, Bangalore (South) Jayanagar Senior Officers of the Transport Department will be participating in the adalat. Public are requested to avail this opportunity for redressal of their grievances, if any, in the adalat.

sm/babu/gpr.

## ಕೊಳವೆ ಬಾವಿ ಹೊಂದಿರುವವರು

# ಕಡ್ಡಾಯವಾಗಿ ನೋಂದಣಿ ಮಾಡಿಸಿ

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರವು ಅಂತರ್ಜಲ ಬಳಕೆಯು ಮರುಪೂರಣಕ್ಕಿಂತ ಶೇ 100 ಕ್ಕಿಂತ ಹೆಚ್ಚು ಇರುವ 12 ಜಿಲ್ಲೆಗಳ 35 ತಾಲ್ಲೂಕುಗಳನ್ನು "ಅತಿಬಳಕೆ' ಪ್ರದೇಶಗಳೆಂದು ಘೋಷಿಸಿ ಅಧಿಸೂಚಿಸಿದೆ, ಅಧಿಸೂಚಿತ ಪ್ರದೇಶಗಳಲ್ಲಿ ಅಧಿನಿಯಮ 2011 ರ ಕಲಂ 12 ರಡಿಯಲ್ಲಿ ಪ್ರತಿಯೊಬ್ಬ ಪ್ರಸ್ತುತ ಅಂತರ್ಜಲ ನೋಂದಣೆಯನ್ನು ಪಡೆಯುವುದು ಕಡ್ಡಾಯ ಎಂದು ಅಂತರ್ಜಲ ನಿರ್ದೇಶನಾಲಯದ ನಿರ್ದೇಶಕರು ತಿಳಿಸಿದ್ದಾರೆ.

ಅಧಿನಿಯಮ 2011 ರ ನಿಯಮ 7ರ ನಮೂನೆ-4 ರಲ್ಲಿ ಪ್ರಸ್ತುತ ಕೊಳವೆ ಬಾವಿ ಹೊಂದಿರುವವರು ವಿವರ ಭರ್ತಿಮಾಡಿ ಗೃಹ ಬಳಕೆಯಾದಲ್ಲಿ ರೂ 50/- ಮತ್ತು ವಾಣಿಜ್ಯ ಬಳಕೆಯಾದಲ್ಲಿ ರೂ. 500/- ಗಳನ್ನು ಅಂತರ್ಜಲ ಪ್ರಾಧಿಕಾರದ ಕೆನರಾ ಬ್ಯಾಂಕ್ ಜಂಟಿ ಖಾತೆ ಸಂಖ್ಯೆ 0788201052332 ಗೆ ಚಲನ್‌ನ್ನು ಅಧ್ಯಕ್ಷರು ಕರ್ನಾಟಕ ಅಂತರ್ಜಲ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪಾವತಿಸಬೇಕು.

ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರಧಾನ ಇಂಜಿನಿಯರ್, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾವೇರಿ ಭವನ, ಬೆಂಗಳೂರು - 560 009 ರವರೆಗೆ ಅರ್ಜಿ ಸಲ್ಲಿಸಬೇಕು. ಈ ಅರ್ಜಿಯನ್ನು ಹಿರಿಯ ಭೂವಿಜ್ಞಾನಿ, ಜಿಲ್ಲಾ ಅಂತರ್ಜಲ ಕಚೇರಿ, 13ನೇ ಮಹಡಿ, ವಿಶ್ವೇಶ್ವರಯ್ಯ ದೊಡ್ಡ ಗೋಪುರ, ಬೆಂಗಳೂರು - 560 001 ಇವರಿಂದ ಪರಿಶೀಲನೆಗೆ ಒಳಪಡಿಸಿ ನಮೂನೆ-5ಎ ನಲ್ಲಿ ಬಳಕೆದಾರರ ನೋಂದಣೆ ಪ್ರಮಾಣ ಪತ್ರವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀಡಲಾಗುವುದು.

ಇತರೆ ಜಿಲ್ಲೆಗಳಲ್ಲಿ ನಮೂನೆ-4ರ ಅರ್ಜಿಯನ್ನು ಜಿಲ್ಲೆಯ ಅಂತರ್ಜಲ ಕಚೇರಿಯ, ಹಿರಿಯ ಭೂವಿಜ್ಞಾನಿ/ಉಪ ನಿರ್ದೇಶಕರಿಗೆ ಸಲ್ಲಿಸಬೇಕು. ನಮೂನೆ-5ಎ ರಲ್ಲಿ ನೋಂದಣೆಯನ್ನು ಹಿರಿಯ ಭೂವಿಜ್ಞಾನಿ/ಉಪ ನಿರ್ದೇಶಕರ ಕಚೇರಿಯಿಂದಲೇ ವಿತರಿಸಲಾಗುವುದು.

ನೋಂದಣೆ ಮಾಡಿಸಿಕೊಡುವುದಾಗಿ ಕೆಲವು ಖಾಸಗಿ ಸಂಸ್ಥೆಗಳು ಹೆಚ್ಚುವರಿ ಹಣ ವಸೂಲಿ ಮಾಡುತ್ತಿರುವುದು ನಿರ್ದೇಶನಾಲಯದ ಗಮನಕ್ಕೆ ಬಂದಿದ್ದು, ಸಾರ್ವಜನಿಕರು ಇಂತಹವರೊಂದಿಗೆ ವ್ಯವಹರಿಸದೆ ಇರಲು ಕೋರಲಾಗಿದೆ.

ಯಾವ ಸಂಸ್ಥೆಯಾಗಲೀ ಅಥವಾ ವ್ಯಕ್ತಿಯಾಗಲೀ ಹಣ ವಸೂಲಿ ಮಾಡುತ್ತಿರುವುದು ಕಂಡು ಬಂದರೆ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಈ ಕೆಳಕಾಣಿಸಿದ ಕಚೇರಿಗಳಿಗೆ ಮಾಹಿತಿ ನೀಡುವುದು.

ಪ್ರಧಾನ ಇಂಜಿನಿಯರ್, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾವೇರಿ ಭವನ, ಬೆಂಗಳೂರು - 560 009, ದೂರವಾಣಿ ಸಂಖ್ಯೆ 080-22945105, ಹಿರಿಯ ಭೂವಿಜ್ಞಾನಿ, ಅಂತರ್ಜಲ ನಿರ್ದೇಶನಾಲಯ, 13ನೇ ಮಹಡಿ ವಿಶ್ವೇಶ್ವರಯ್ಯ ದೊಡ್ಡ ಗೋಪುರ, ಬೆಂಗಳೂರು - 560 001, ದೂರವಾಣಿ ಸಂಖ್ಯೆ : 080-22862108, ಮೊಬೈಲ್ ಸಂಖ್ಯೆ - 9845132136,

ಹೆಚ್ಚಿನ ಮಾಹಿತಿಗಾಗಿ ಅಪರ ನಿರ್ದೇಶಕರು (ಅಂತರ್ಜಲ), ನಂ 49, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ ಬೆಂಗಳೂರು - 560 001, ದೂರವಾಣಿ ಸಂಖ್ಯೆ ಕಚೇರಿ - 080-22384134, ಮೊಬೈಲ್ ಸಂಖ್ಯೆ - 9964010538.

ಈ ಕಚೇರಿಗಳಿಂದಾಗಲಿ ಅಥವಾ ಇಲಾಖಾ ವೆಬ್‌ಸೈಟ್ www.khanija.kar.ncode.in ನಿಂದ ಪಡೆಯಬಹುದಾಗಿದೆ ಎಂದು ಅಂತರ್ಜಲ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

## ಬೆಂಗಳೂರಿನಲ್ಲಿ ವಾಯುಪಡೆ ನೇಮಕಾತಿ ರ್‍ಯಾಲಿ

**ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)**

ಭಾರತೀಯ ವಾಯು ಪಡೆಯು ಗ್ರೂಫ್ ಎಕ್ಸ್ ವಿಭಾಗದ ತಾಂತ್ರಿಕ ಹುದ್ದೆಗಳ ಭರ್ತಿಗಾಗಿ 2014ರ ಡಿಸೆಂಬರ್ 15 ರಿಂದ ಬೆಂಗಳೂರಿನ ಕಬ್ಬನ್ ರಸ್ತೆಯ ಏರ್‌ಮನ್ ಆಯ್ಕೆ ಕೇಂದ್ರದಲ್ಲಿ ಬೃಹತ್ ನೇಮಕಾತಿ ರ್‍ಯಾಲಿಯನ್ನು ಹಮ್ಮಿಕೊಂಡಿದೆ.

ರಾಜ್ಯದ ಅವಿವಾಹಿತ ಪುರುಷ ಅಭ್ಯರ್ಥಿಗಳು ನೇಮಕಾತಿ ರ್‍ಯಾಲಿಯಲ್ಲಿ ಪಾಲ್ಗೊಳ್ಳಬಹುದಾಗಿದೆ. 1995 ರ ಫೆಬ್ರವರಿ 1 ರಿಂದ 1998 ರ ಜೂನ್ 30 ರ ಅವಧಿಯಲ್ಲಿ ಜನಿಸಿದ ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಗಣಿತ, ಭೌತಶಾಸ್ತ್ರ ಮತ್ತು ಇಂಗ್ಲೀಷ್‌ನಲ್ಲಿ ಸರಾಸರಿ ಕನಿಷ್ಠ ಶೇ. 50 ಅಂಕ ಹಾಗೂ ಇಂಗ್ಲೀಷ್ ವಿಷಯದಲ್ಲಿ ಕನಿಷ್ಠ ಶೇ. 50 ಅಂಕ ಗಳಿಸಿರಬೇಕು. ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಪಾಲಿಟೆಕ್ನಿಕ್ ಸಂಸ್ಥೆಯಿಂದ ಸರಾಸರಿ ಕನಿಷ್ಠ ಶೇ. 50 ಅಂಕ ಹಾಗೂ ಇಂಗ್ಲೀಷ್‌ನಲ್ಲಿ ಕನಿಷ್ಠ ಶೇ. 50 ಅಂಕಗಳೊಂದಿಗೆ ಮೆಕ್ಯಾನಿಕಲ್/ ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್/ಆಟೋಮೊಬೈಲ್/ಕಂಪ್ಯೂಟರ್ ಸೈನ್ಸ್/ಇನ್ಸ್ಟ್ರುಮೆಂಟೇಷನ್ ಟೆಕ್ನಾಲಜಿ/ಇನ್‌ಫರ್‌ಮೇಷನ್ ಟೆಕ್ನಾಲಜಿ ವಿಷಯದಲ್ಲಿ ಮೂರು ವರ್ಷಗಳ ಡಿಪ್ಲೊಮ ಪಡೆದಿರಬೇಕು. ಡಿಪ್ಲೋಮಾದಲ್ಲಿ ಇಂಗ್ಲೀಷ್ ವಿಷಯ ಇಲ್ಲದಿದ್ದರೆ, ಇಂಟರ್‌ಮೀಡಿಯಟ್/ ಮೆಟ್ರಿಕ್ಯುಲೇಷ್‌ನಲ್ಲಿ ಇಂಗ್ಲೀಷ್ ವಿಷಯದಲ್ಲಿ ಕನಿಷ್ಠ ಶೇ. 50 ಅಂಕ ಪಡೆದಿರಬೇಕು. ಅರ್ಹ ಅಭ್ಯರ್ಥಿಗಳು, ಮೆಟ್ರಿಕ್ಯುಲೇಷನ್, ದ್ವಿತೀಯ ಪಿ.ಯು.ಸಿ. ಅಥವಾ ಮೂರು ವರ್ಷದ ಡಿಪ್ಲೊಮಾ ಕೋರ್ಸ್‌ನ ಅಂಕಪಟ್ಟಿಗಳ ಮೂಲ ಪ್ರತಿಗಳು ಹಾಗೂ ಸ್ವಯಂ ಧೃಢೀಕರಿಸಿದ ತಲಾ 4 ಪ್ರತಿಗಳು, 7 ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರಗಳೊಡನೆ ನೇಮಕಾತಿ ರ್‍ಯಾಲಿಗೆ ಹಾಜರಾಗಬಹುದು. ಜಿಲ್ಲಾವಾರು ಪರೀಕ್ಷಾ ದಿನಾಮಕ, ಅರ್ಹತಾ

ಷರತ್ತು, ವೈದ್ಯಕೀಯ ಮಾನದಂಡಗಳು, ಅಗತ್ಯ ದಾಖಲೆಗಳು ಆಯ್ಕೆ ವಿಧಾನ ಮತ್ತಿತರ ಮಾಹಿತಿಗಾಗಿ ಭಾರತೀಯ ವಾಯುದಳದ ಅಂತರ್ಜಾಲ ತಾಣ www.indianairforce.nic.in ಅಥವಾ ವಾಯುದಳ ನೇಮಕಾತಿ ಕೇಂದ್ರ ನಂ. 1 ಕಬ್ಬನ್ ರಸ್ತೆ, ಬೆಂಗಳೂರು -560 001, ದೂರವಾಣಿ ಸಂಖ್ಯೆ 080-25592199, ಮಿಂಚಂಚೆ co7asc@dataone.in ಸಂಪರ್ಕಿಸಲು ಅಥವಾ ಆಯಾ ಜಿಲ್ಲೆಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಸಂಪರ್ಕಿಸಲು ಕೋರಿದೆ.

ಸಮ/ಬಾಬು/ಕೆಎಂ